ಅ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಕಿ.ಮೀ ರಸ್ತೆ ಅಭಿವೃದ್ಧಿ ಮಾಡಿಸಲು ಪ್ರತಿ ವರ್ಷ 15 ಲಕ್ಷ ಬಿಡುಗಡೆ ಮಾಡುವಭರವಸೆಯನ್ನು ಸರ್ಕಾರವು ಪೂರೈಸಿದೆಯೇ;

ಆ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು? ಮತ್ತು ಯಾವಾಗ ಪೂರೈಸಲಾಗುವುದು;

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ)

ಸಾಲು	ಬಿಡುಗಡೆ ಮಾಡಿರುವ ಹಣ
1995-96	40.00 ಲಕ್ಷ
1996-97	40.00 ಲಕ್ಷ

ಅ) 1995-96ನೇ ಸಾಲಿಗೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 15.00 ಲಕ್ಷ ಖರ್ಚು ಮಾಡಲು ಹಣವನ್ನು ಬಿಡುಗಡೆ ಮಾಡಲಾಗಿದೆ. ಮುಂಬರುವ ಸಾಲುಗಳಲ್ಲಿ ಹಣದ ಲಭ್ಯತೆಗನುಗುಣವಾಗಿ ಹಣ ಪೂರೈಸಲಾಗುವುದು.

ಆ) ಮೇಲಿನ (ಅ) ಭಾಗದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಆಶ್ರಯ ಮತ್ತು ಅಂಬೇಡ್ಕರ್ ಯೋಜನೆ

547 (849) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97, 1997-98ನೇ ಸಾಲಿನಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಎಷ್ಟು ಮನೆಗಳನ್ನು ಕಟ್ಟಿಸಲು ಉದ್ದೇಶಿಸಿದೆ ಹಾಗೂ ಇದಕ್ಕೆ ತಗಲುವ ವೆಚ್ಚ ವೆಷ್ಟು; (ಜಿಲ್ಲಾವಾರು ವಿವರ ನೀಡುವುದು)?

ಆ) 1994-95, 1995-96ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿದ್ದು, ಬಾಕಿ ಇರುವ ಮನೆಗಳೆಷ್ಟು, ಹಾಗಿದ್ದಲ್ಲಿ ಕಾರಣಗಳೇನು ಮತ್ತು ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):

ಅ) 1996-97ನೇ ಸಾಲಿನಲ್ಲಿ ಮನೆಗಳನ್ನು ಕಟ್ಟಲು ಉದ್ದೇಶಿಸಿದ ಗುರಿ ಹಾಗೂ ತಗಲುವ ವೆಚ್ಚದ ಬಗ್ಗೆ ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

1997-98ನೇ ಸಾಲಿನ ಮನೆಗಳ ಜಿಲ್ಲಾವಾರು ಗುರಿಯನ್ನು ಮೇ 1997 ರಲ್ಲಿ ನಿರ್ಧರಿಸಲಾಗುವುದು.

ಅ) 1994-95, 1995-96ರಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ, ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಮನೆಗಳು ಕೆಳಕಂಡಂತಿವೆ.

	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು.
1994-95	9160	7055	2105
1995-96	60,000	40,904	19,096

ಪ್ರಗತಿಯಲ್ಲಿರುವ ಬಾಕಿ ಮನೆಗಳಿಗೆ ಹುಡ್ಕೋ ಸಂಸ್ಥೆಯಿಂದ ರೂ.46.00 ಕೋಟಿ ಸಾಲದ ಬಿಡುಗಡೆ ನಿಗಧಿತ ವೇಳೆಗೆ ಬಿಡುಗಡೆ ಆಗದೇ ಇದ್ದುದರಿಂದ ಪ್ರಗತಿಯಲ್ಲಿ ಕುಂಠಿತವಾಗಿದೆ ಹುಡ್ಕೋ ಸಂಸ್ಥೆ ಪ್ರಗತಿಯ ಆಧಾರದ ಮೇಲೆ ಇದುವರೆವಿಗೂ ರೂ. 26.00 ಕೋಟಿ ಹಣ ಬಿಡುಗಡೆ ಮಾಡಿದ್ದು, ಉಳಿದ 20,00 ಕೋಟಿ ಹಣವನ್ನು ಫೆಬ್ರವರಿ ಹಾಗೂ ಮಾರ್ಚ್ ಅಂತ್ಯ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಎಲ್ಲಾ ಮನೆಗಳು ಪ್ರಗತಿಯಲ್ಲಿರುವುದರಿಂದ, ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ.

ಸಾರಿಗೆ ಸಂಸ್ಥೆಯ ಖಾಸಗೀಕರಣದ ಕುರಿತು

550 (790) ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಸಂಸ್ಥೆಯನ್ನು ಬಾಗಶಃ ಖಾಸಗೀಕರಣ ಮಾಡಲು ಸರ್ಕಾರವು ಉದ್ದೇಶಿಸಿದೆಯೇ;

ಆ) ಖಾಸಗಿ ಬಸ್‌ಗಳಿಗೆ ಅನ್ ಕಾಂಟ್ರಾಕ್ಟ್ ಪರ್ಮಿಟ್ ಪದ್ಧತಿಯನ್ನು ಜಾರಿಗೆ ತರಲಾಗುವುದೇ;

ಇ) ಬೆಂಗಳೂರು ಹಾಗೂ ಇತರ ಮುಖ್ಯ ನಗರಗಳ ನಗರ ಸಾರಿಗೆ ಸೌಕರ್ಯ ಒದಗಿಸಲು ಖಾಸಗಿಯವರಿಗೆ ಬಸ್‌ಗಳನ್ನು ಓಡಿಸಲು ಅನುಮತಿ ನೀಡಲಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಸುರತ್ಕಲ್ ಕ್ಷೇತ್ರದ ಅರಸುಳಿ ಪದವಿನಲ್ಲಿ ದರ್ಖಾಸ್ತು ಭೂಮಿ ಕೊಡುವಲ್ಲಿ ನಡೆದ ಅಕ್ರಮ

551 (792) ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?